**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 06.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಸಹಾಯಕ ಸರ್ಕಾರಿ ವಕೀಲರಿಂದಃ-**

ನನ್ನ ತಂದೆ-ತಾಯಿಯ ಹೆಸರು ಪ್ರಕಾಶ ಮತ್ತು ಸುಧಾಮಣಿ. ನನ್ನ ತಂದೆ ನನ್ನನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ಭೋಗಪ್ಪ ಮತ್ತು ರೋಹಿಣಿ ಎಂದು ಅವರೆ ಮಾಹಿತಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಟ್ರ್ಯಾಕ್ಟರ್ ಚಾಲಕನಾಗಿರುತ್ತೇನೆ. ನನ್ನ ತಂದೆ-ತಾಯಿಯ ಹೆಸರು ಭೋಗಪ್ಪ ಮತ್ತು ರೋಹಿಣಿಯಾಗಿದ್ದರೂ ಕೂಡ ಸರ್ಕಾರದಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಪ್ರಕಾಶ ಮತ್ತು ಸುಧಾಮಣಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ 13.09.2002 ಎಂದರೆ ಸರಿಯಲ್ಲ. ನಾನು ಸದರಿ ದಿವಸವೇ ಜನಿಸಿದ ಬಗ್ಗೆ ನನ್ನ ಪೋಷಕರಿಗೆ ಗೊತ್ತಿರುವುದರಿಂದ ಸದರಿ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ತಪ್ಪಾಗಿರುತ್ತೆದೆಂದು ನನಗೆ 2024 ರಲ್ಲಿ ಗೊತ್ತಾಗಿರುತ್ತದೆ. ನನಗೆ ಈ ಮೊದಲೇ ಮಾಹಿತಿ ಇದ್ದರೂ ಕೂಡ ಇತ್ತೀಚೆಗೆ ಗೊತ್ತಾಗಿರುತ್ತೆದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಪ್ಪಿನಿಂದ ನನ್ನ ತಂದೆ-ತಾಯಿಗಳ ಹೆಸರು ಮತ್ತು ನನ್ನ ಜನ್ಮ ದಿನಾಂಕ ತಪ್ಪಾಗಿ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರದಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**